Doc-1(3)
1-R-21

Regd No BG 155 4-10-1969

SATYAVADI Daily MYSORE 4 ★ 53 rd Year of Publication

ಸ ತ್ಯ ವಾ ದಿ

ಸುವರ್ಣ ಮಹೋತ್ಸವ ನಡೆಬೇರಿಸಿದ ಪತ್ರಿಕೆ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಕಲ್ಕತ್ತಾದಲ್ಲಿ ಹೊಡೆದಾಟ – ಇಬ್ಬರ ಸಾವು

164 ಮಿಲಿಯ ಡಾಲರು

ವಿಶ್ವಸಂಸ್ಥೆ — 1970 ರಲ್ಲಿ ವಿಶ್ವಸಂಸ್ಥೆ ಖರ್ಚಿಗೆ ಪ್ರಧಾನಕಾರ್ಯದರ್ಶಿಯು ಥಾಂಟರು ಬಡ್ಜೆಟ್‌ನಲ್ಲಿ 164 ಮಿಲಿಯ ಡಾಲರು ಕೇಳಿದ್ದಾರೆ.

ಹೊಡೆದಾಟದಲ್ಲಿ ಸಾವು

ಕಲ್ಕತ್ತಾ — ಮಥುರಾಪುರ ಪೋಲೀಸು ಸ್ಟೇಷ್ ಹತ್ತಿರ ಎರಡು ಗ್ರಾಮಗಳಲ್ಲಿ ಸಂಯುಕ್ತ ರಂಗ್ಯಪಕ್ಷದ ವಿರುದ್ಧ ಗುಂಪುಗಳಲ್ಲಿ ಹೊಡೆದಾಟವಾಗಿ ಇಬ್ಬರು ಸತ್ತು ಇಪ್ಪತ್ತೈದು ಮಂದಿ ಗಾಯಗೊಂಡರು— 10 ಮಂದಿಯ ದಸ್ತಗಿರಿಯಾಗಿದೆ.

ಈ ದುಂದು ಖರ್ಚು

ರಾಂಚಿ— ಗಾಂಧೀ ದರ್ಶನ ಮತ್ತಿತರ ಕಾರ್ಯಗಳಿಗಾಗುತ್ತಿರು ವೃಥಾ ಖರ್ಚಿಗೆ ಮನನೊಂದುಕೊಂಡ ಭಾವೆಯವರು ಇದು ಭಾರತಕ್ಕೆ ತಕ್ಕುದಲ್ಲವೆಂದರು – ದೇಶಾದ್ಯಂತ 132000 ಗ್ರಾಮಗಳು ಭೂದಾನವಾಗಿ ದೊರತಿವೆ.

ಹೀಗಾದೀತು

ಬೆಂಗಳೂರು— ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ಸು ಅಧ್ಯಕ್ಷತೆ ತ್ಯಜಿಸುವ ಕಾಲ ದೂರವಿಲ್ಲವೆಂದು ಆಡಳಿತ ಸುಧಾರಣಾ ಸಮಿತಿ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಹೇಳಿದರು.

○

ಗಾಂಧಿಶತಾಬ್ದಿ : ಸೇವಾಶ್ರಮದಲ್ಲಿ ಮನೆಮುಟ್ಟುವ ಸಮಾರಂಭ ನಡೆಸಲಾಯಿತು.

ಭೂ ದಾನ

ಬಿಜಾಪುರ— 32 ಎಕ್ರೆ ಭೂಮಿಯನ್ನು ಭೂತ್ಯಾಲಿನ ಭೂಮಿಯಿಲ್ಲದ 8 ಜನ ಹರಿಜನರಿಗೆ ಸರ್ಕಾರದ ಪರವಾಗಿ ಜಿಲ್ಲಾಧಿಕಾರಿಗಳು ದಾನ ಮಾಡಿದರು.

ಸಿನಿಮಾ ಮುಂದೆ ಗಲಭೆ

ಕರ್ನೂಲು — ಒಂದು ಸಿನಿಮಾದಲ್ಲಿ ಒಳಗೆ ಕುಳಿತುಕೊಳ್ಳುವ ವಿಷಯದಲ್ಲಿ ಸಿನಿಮಾಲೀಕರು ಮತ್ತು ಅವರ ಸ್ನೇಹಿತರ ಪರದ ಒಂದು ಗುಂಪಿಗೂ ವಿರುದ್ಧದವರ ಗುಂಪಿಗೂ ಆದ ಘರ್ಷಣೆಯಲ್ಲಿ ಸಿನಿಮಾ ಮಂದಿರಕ್ಕೆ ತ್ರುಂಬಾ ನಷ್ಟವಾಯಿತು

ಒಳ್ಳೇ ಕೆಲಸ

ಬೆಂಗಳೂರು— 69–70 ರಲ್ಲಿ ಎಲೆಕ್ಟ್ರಿಸಿಟಿ ಬೋರ್ಡು ಸೇವೆ ಒದಗಿಸುವ ಪಂಪ್ ಸೆಟ್ಟಿನ ಸಂಖ್ಯೆ 30000 ಕ್ಕೆ ಹೆಚ್ಚಿಸಲಾಗಿದೆ.

ಗಾಂಧಿ ಶತಾಬ್ದಿ

ಇಥೋಪಿಯಾದಲ್ಲಿನ ರಾಜಧಾನಿ ಅಡಿಸಬಾಬಾದಲ್ಲಿ ಚಕ್ರವರ್ತಿ ಹೈಲೆ ಸಲೇಸಿ ಒಂದು ಪ್ರಮುಖ ಬೀದಿಗೆ ಗಾಂಧೀಜೀ ಹೆಸರನ್ನಿಟ್ಟರು – ರಾಜಕುಮಾರರು ಗಾಂಧೀ ಸ್ಮಾರಕ ಆಸ್ಪತ್ರೆಯಲ್ಲಿ ಗಾಂಧೀಜೀ ಪ್ರತಿಮೆ ಅನಾವರಣ ಮಾಡಿದರು

ಗಾಂಧೀಜಿ ಶತಮಾನೋತ್ಸವ

ವಿಶ್ವವ್ಯಾಪ್ತಿ ಗಾಂಧೀ ಜನ್ಮ ಶತಮಾನೋತ್ಸವವು ವೈಭವವಾಗಿ ನಡೆಯಿತು.

ನವದೆಹಲಿಯಲ್ಲಿ ಪ್ರಪ್ರಥಮವಾಗಿ ರೂ 10 ಬೆಳ್ಳೀ ನಾಣ್ಯಗಳೂ ನೋಟುಗಳೂ ಬಿಡುಗಡೆ ಮಾಡಲಾಯಿತು.

ಕೊಲಂಬೋದಲ್ಲಿ ಭಾರೀ ಸಾರ್ವಜನಿಕ ಸಭೆ ನಡೆದು ಪ್ರಧಾನಿ ಡಡ್ಲೆ ಸೆನನಾಯಕರೂ ಸ್ಫೂರ್ತಿದಾಯಕ ಭಾಷಣ ಮಾಡಿ ಗಾಂಧೀಜೀ ಆದರ್ಶ ಅನುಸರಿಸುವಂತೆ ತಿಳಿಸಿದರು.

ಜಾಂಬಿಯಾದಲ್ಲಿ ಎರಡು ಪತ್ರಿಕೆಗಳು ವಿಶೇಷ ಸಂಚಿಕೆ ಹೊರಡಿಸಿದವು.

★

ಅಧ್ಯಕ್ಷರ ಕರೆ

ನವದೆಹಲಿ— ಗಾಂಧೀಜೀ ಮಾರ್ಗದಲ್ಲಿ ನಡೆಯಲು ಜನತೆಗೆ ಅಧ್ಯಕ್ಷ ಗಿರಿಯವರು ಕರೆಯಿತ್ತಿರುವರು.

ತಿರಸ್ಕಾರ

ಬೆಂಗಳೂರು— ರಾಜ್ಯದ ವಿವಿಧ ಭಾಗಗಳಲ್ಲಿನ ತಸಮಾನತೆಯನ್ನು ಚರ್ಚಿಸಲು ಶಾಸನ ಸಭೆಯ ತುರ್ತು ಅಧಿವೇಶನ ನಡೆಸಬೇಕೆಂಬ ಕೇಳಿಕೆಯು ತಿರಸ್ಕರಿಸಲ್ಪಟ್ಟಿತು.

ಕರ್ನಾಟಕ ಒಂದು

ಹುಬ್ಬಳ್ಳಿ— ಕರ್ನಾಟಕ ಒಂದು ಮತ್ತು ಅದು ಎಂದಿಗೂ ಹಾಗೆ ಉಳಿಯುವುದು ಎಂದು ಮುಖ್ಯಮಂತ್ರಿಯವರು ಹೇಳಿದರು.

ಶುಚಿ ! ರುಚಿ ! ! ಹಿತ ! ! !

ಫೋನ್ : 23280

★ ಚಂದ್ರ ಕೆಫೆ ★

ಚಾಮರಾಜಪುರಂ, (ಕೋರ್ಟ್ ಸಮೀಪ) ಮೈಸೂರು

ಇಂದು 11 ನೇ ವರ್ಷ ಪ್ರಾರಂಭ

ಈ ಸಂದರ್ಭದಲ್ಲಿ ನಮ್ಮ ಮಾನ್ಯ ಗಿರಾಕಿಗಳಿಗೂ, ಹಿತೈಷಿಗಳಿಗೂ, ನೌಕರ ವರ್ಗಕ್ಕೂ ಸಮಸ್ತರಿಗೂ ವಂದನೆಗಳು.

ಯಾವತ್ತೂ ಶಾಶ್ವತ ಪ್ರೋತ್ಸಾಹ ಮತ್ತು ಸಹಕಾರಗಳನ್ನು ಅಪೇಕ್ಷಿಸುವ,

ಎಸ್. ಎನ್. ಸುಬ್ರಹ್ಮಣ್ಯರಾವ್,
ಮಾಲೀಕರು.

ಪಾರ್ಕ್

ಹುಬ್ಬಳಿ— ಗಾಂಧಿ ಶತಮಾನೋತ್ಸವ ಪಾರ್ಕಿನ ಅಸ್ತಿಭಾರಶಿಲೆಯನ್ನು ಮೇಯರರು ಸ್ಥಾಪಿಸಿದರು.

★

ಸರಿಸಮಾನ

ಕೊಲಾರ— ಸೂಕ್ತ ತಾರೀಖುಗಳಲ್ಲಿ ಟ್ರಂಕ್ ಕಾಲ್ ಟೆಲಿಫೋನ್ ಚಾರ್ಜು ಕೊಟ್ಟಿದ್ದವರ ಟೆಲಿಫೋನು ಸಂಬಂಧ ತಪ್ಪಿಸಲಾಗೆದೆಯೆಂದೂ, ಈಸೈಕಿ ಡೆಪ್ಟೀಕಮಿಷನರದೂ ಒಂದೆಂದು ವರದಿಯಾಗಿದೆ.

★

ಇದೊಂದು ಅಭಿಪ್ರಾಯ

ದೊಡ್ಡಬಳ್ಳಾಪುರ— ಸರಕಾರವು ಕುಟುಂಬ ಯೋಜನೆಗೆ ವ್ಯಯಮಾಡುವ ಬದಲು ರೂ 300 ಕೋಟಿ ನೆರವನ್ನು ರೈತರಿಗೆ ನೆರವು ನೀಡಿದರೆ ತುಂಬಾ ಉಪಯೋಗವಾಗುವುದೆಂದು ಶಾಸನಸಭಾ ಸದಸ್ಯ ಶ್ರೀ ಎಂಟಿ ಶ್ರೀಕಂಠಯ್ಯ ಹೇಳಿದರು.

○

ಗಾಂಧೀಜಿ ಸ್ಮಾರಕ

ಮೈಸೂರು— ಟೌನ್‌ಹಾಲ್ ಉತ್ತರಕಡೆ ಸ್ಥಾಪಿಸಲಾಗುವ ಗಾಂಧಿ ಸ್ಮಾರಕದ ಶಂಕುಸ್ಥಾಪನೆಯನ್ನು ಪೌರಸಭಾಧ್ಯಕ್ಷ ಶ್ರೀ ಎಂ ಎ ತಿಮ್ಮಯ್ಯನವರು ನೆರವೇರಿಸಿದರು.

★

ಸಲಹೆ

ಬೆಂಗಳೂರು— ಮೈಸೂರು ಸ್ಥಾಪಿಸುತ್ತಿರುವ ಕಬಿನಿ ಮತ್ತು ಹೇಮಾವತಿ ಪ್ರಾಜೆಕ್ಟುಗಳ ವ್ಯಾಜ್ಯವನ್ನು ಚರ್ಚಿಸಲು ಮೈಸೂರು, ತಮಿಳುನಾಡು ಮತ್ತು ಕೇರಳ ಮುಖ್ಯಮಂತ್ರಿಗಳ ಸಭೆನಡೆಸುವಂತೆ ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿ ಹೇಳಿದರು

ಹುಳಿಯನ್ನ ಮೊಸರನ್ನ

ಮೈಸೂರು— ದಸರಾ ಮಹೋತ್ಸವಕ್ಕೆ ಬರುವವರ ಅನುಕೂಲಕ್ಕೆ ತಾ ॥ 18, 19, 20 ರಂದು ನಗರದ ಪ್ರಮುಖ ಕೇಂದ್ರಗಳಲ್ಲಿ 200 ಗ್ರಾಂ ತೂಕದ ಹುಳಿಯನ್ನಕ್ಕೆ 40 ಪೈಸೆ, ಮೊಸರನ್ನಕ್ಕೆ 35 ಪೈಸೆಗೆ ದೊರಯುವ ಏರ್ಪಾಡು ಮಾಡ ಮಾಡಲಾಗಿದೆ.

★

ಖೂರವರ ಉಪವಾಸ

ನವದೆಹಲಿ— ದೇಶದಲ್ಲಿ ಹೆಚ್ಚುತ್ತಿರುವ ಹಿಂಸಾಕೃತ್ಯ ಮತ್ತು ದ್ವೇಷಾಸೂಯೆ ವಿರುದ್ಧವಾಗಿ ಖಾನ್ ಅಬ್ದುಲ್ ಗಫಾರ್ ಖಾನರು ನಿನ್ನೆ ನಮಾಜು ನಂತರ ಮೂರು ದಿನಳಿಳ ಉಪವಾಸ ಪ್ರಾರಂಭಿಸಿದರು.

ಗಾಂಧೀಜೀ ಅಮೃತವಾಣಿ

ಅಹಿಂಸೆ ನನ್ನ ದೇವರು,
ಸತ್ಯ ನನ್ನ ದೇವರು.

ನಮ್ಮ ದೇಶದಲ್ಲಿ ಇಪ್ಪತ್ತಾರು ಬಗೆಯ ದನಗಳೂ, ಎಂಟು ಬಗೆಯ ಎಮ್ಮೆಗಳೂ ಇವೆ.

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ವುಡ್‌ಲ್ಯಾಂಡ್ಸ್ ಜಯಪ್ರದ 4ನೇ ವಾರ

— ಆತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್
ಮದನಪುರಿ, ಶಬ್ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಈ ದಿವಸ

.... ಚಿತ್ತಾಕರ್ಷಕ ಹಿಂದಿ ಚಿತ್ರ ....

ಮಾಧವಿ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿನಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

SHAKTI
SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapura, Mysore